ಸಾಯತಕ್ಕದ್ದನ್ನು ನಾವು ಕೇಳಿದ್ದೇವೆ. ಈಗ ಮಾನ್ಯ ಮೊಯಿಲಿಯವರ ಕಾಲದಲ್ಲಿ ಜೈಲಿನಲ್ಲಿದ್ದ ಜನಗಳೂ ಸಹಿತ ಸಾಯುವುದು ಪ್ರಾರಂಭವಾಗಿರುವುದು ಅತ್ಯಂತ ದುಃಖದ ವಿಚಾರ. ಮೂರು ದಿನಗಳ ಹಿಂದೆ ಶ್ರೀನಿವಾಸ ಎಂಬ ತಿಗಳ ಜಾತಿಯ ನಮ್ಮ ಕನಕಪುರ ತಾಲ್ಲೂಕಿನ ಹುಡುಗ ಕಳೆದ ಏಳೆಂಟು ವರ್ಷಗಳಿಂದ ಕೂಲಿ ಮಾಡಿಕೊಂಡು ಜೀವನ ಮಾಡುತ್ತಿದ್ದ. ಅವನ ಸ್ನೇಹಿತರು ಯಾರೋ ಇವನು ಕಳ್ಳತನ ಮಾಡಿದ ಎಂದು ಹೇಳಿ ಒಂದು ಕಳ್ಳತನದ ಕೇಸಿನಲ್ಲಿ ಅರೆಸ್ಟ್ ಆಗಿ ಜುಡೀಷಿಯಲ್ ಕಸ್ಟಡಿಯಲ್ಲಿ ಕಳಿದ ಹಲವಾರು ದಿನಗಳಿಂದ ಸೆಂಟ್ರಲ್ ಜೈಲಿನಲ್ಲಿದ್ದ. ತಮಗೆ ಗೊತ್ತಿರುವ ಹಾಗೆ ಜೈಲಿನಲ್ಲಿ, ಸಾಯಂಕಾಲ 5 ಗಂಟೆಗೆ ಎಲ್ಲಾ ಬ್ಯಾರೆಕ್‌ಗಳನ್ನು ಲಾಕ್ ಮಾಡುತ್ತಾರೆ. ಮತ್ತೆ ಓಪನ್ ಮಾಡತಕ್ಕದ್ದು ಮಾರನೆಯ ದಿವಸ ಬೆಳಿಗ್ಗೆ 7 ಗಂಟೆಗೆ. ಆ ಪಾಯಿಂಟ್‌ನಲ್ಲಿ ಜೈಲಿನಲ್ಲಿ ಸೆಕ್ಯುರಿಟಿ ಬಹಳ ಚೆನ್ನಾಗಿದೆ. ಕೆಲವು ಜೈಲುಗಳಲ್ಲಿ ಏನು ಮಾಡಿದ್ದಾರೆಂದರೆ ನಮ್ಮ ಕರ್ನಾಟಕದಲ್ಲಿ ಆ ಬ್ಯಾರೆಕ್ ಒಳಗಡೆ ಇರತಕ್ಕ ಗೋಡೆ ಇದೆಯಲ್ಲಾ ಆ ಗೋಡೆಗೆ ತಂತಿಗಳನ್ನು ಹಾಕಿ, ಆ ತಂತಿಗಳಲ್ಲಿ ಕರೆಂಟ್ ಹಾಯಿಸತಕ್ಕದ್ದನ್ನೂ ನಾವು ನೋಡಿದ್ದೇವೆ. ಆ ಬಾಂಗ್ಲಾ ದೇಶದ ವಾರ್ ಪ್ರಿಸನರ್ಸ್‌ನ್ನು ಅಂತಹವರನ್ನೆಲ್ಲಾ ಇಡತಕ್ಕದ್ದು. ಮತ್ತೆ ಜೈಲಿನ ಶಿಸ್ತನ್ನು ಅವರು ಸ್ವಲ್ಪ ಬ್ರೇಕ್ ಮಾಡಿದರೆ, ಅವರನ್ನು ತಕ್ಷಣ ಡೆತ್‌ಸೆಲ್‌ಗೆ ತೆಗೆದುಕೊಂಡು ಹೋಗಿ ಹಾಕುತ್ತಾರೆ. ಆ ಡೆತ್‌ಸೆಲ್‌ನಲ್ಲಿ ಅವರನ್ನು ಹಾಕತಕ್ಕಂಥ ಸಂದರ್ಭದಲ್ಲಿ ಸ್ವಲ್ಪ ಅವರಿಗೆ ಬೆಳಕು ಬರುತ್ತದೆ ಎನ್ನುವುದನ್ನು ಬಿಟ್ಟರೆ, ಮಧ್ಯಾಹ್ನ ಒಂದು ಊಟವನ್ನು ಕೊಡುವುದನ್ನು ಬಿಟ್ಟರೆ, It is a punishment within the Jail, ಅಂಥಾದ್ದರಲ್ಲಿ ಈ ಹುಡುಗ ಅಂಡರ್ ಟ್ರೈಯಲ್ ಆಗಿರತಕ್ಕವನಿಗೆ ಸಾಮಾನ್ಯವಾಗಿ ಜೈಲ್‌ನಲ್ಲಿ ಬಟ್ಟೆ ಕೊಡುವುದಿಲ್ಲ. ಅವನ ಬಟ್ಟೆಯನ್ನೇ ಅವನು ಹಾಕಿಕೊಳ್ಳಬಹುದು. ಈಗ ಆ ಹುಡುಗ ಸತ್ತಿದ್ದಾನೆ ಎನ್ನತಕ್ಕಂಥಾದ್ದು. ಅವನ ವಯಸ್ಸು ಎಷ್ಟು ಎಂದರೆ, ನಿನ್ನೆ ದಿವಸ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ವರದಿ ಸಹ ಆಗಿದೆ. ಅವನ ವಯಸ್ಸು 22 ವರ್ಷ. ಇದ್ದಕ್ಕಿದ್ದ ಹಾಗೆ, ಅವನು ಸತ್ತುಹೋಗಿಬಿಟ್ಟ ಎಂದು ಹೇಳಿದ್ದಾರೆ. ನಮ್ಮ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಒಂದು ಆಸ್ಪತ್ರೆ ಇದೆ. ಅದಕ್ಕೆ ಒಬ್ಬ ಅಸಿಸ್ಟೆಂಟ್ ಸರ್ಜನ್ ಇರುತ್ತಾರೆ ; ಅವರು ಪ್ರತಿದಿನ ಹೋಗಿ ಖೈದಿಗಳಿಗೆ ಏನಾದರೂ ಖಾಯಿಲೆ ಇದೆಯೇ ಎಂದು ನೋಡುತ್ತಾರೆ. ಅದಾದನಂತರ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಜೈಲ್ ವಾರ್ಡ್ ಎಂದು ಇದೆ. ಅಲ್ಲಿಗೆ ಶಿಫ್ಟ್ ಮಾಡುತ್ತಾರೆ. ಇಂತಹ ಸಂದರ್ಭದಲ್ಲಿ ಅವನು ಆಕಸ್ಮಿಕವಾಗಿ ಸಾವೀಗೀಡಾಗಿರುವುದು ಅನೇಕ ಸಂಶಯಗಳಿಗೆ ಆಸ್ಪದವಾಗಿದೆ. ಇದರ ಜೊತೆಗೆ ನನಗೆ ಗೊತ್ತಿರುವ ಹಾಗೆ ನಮ್ಮ ಜೈಲುಗಳ ಪರಿಸ್ಥಿತಿ ಬಹಳ ಸುಧಾರಣೆ ಆಗಬೇಕಾಗಿದೆ. ಅಂಡರ್‌ಟ್ರಯಲ್ಸ್ ಆಗಿರಲಿ, ಅಥವಾ ಪ್ರಿಸನರ್ಸ್ ಆಗಿರಲಿ ಅವರ ಬಗ್ಗೆ ನಿಯಮಾವಳಿ ಪ್ರಕಾರ, ಮಾನ್ಯುಯಲ್ ಪ್ರಕಾರವೇ ಅಲ್ಲಿರತಕ್ಕಂಥ ಅಧಿಕಾರಿಗಳು, ನಡೆದುಕೊಳ್ಳಬೇಕಾಗುತ್ತದೆ. ಆದರೆ ಅವರು ಆ ತರಹ ನಡೆದುಕೊಳ್ಳುತ್ತಿಲ್ಲವೆಂದು ನಾನು ಕೇಳಿದ್ದೇನೆ. ಆ ಹುಡುಗನ ಪೋಷಕವರ್ಗದವರು ನನ್ನಲ್ಲಿಗೆ ಬಂದಿದ್ದರು. ಇವನು ಸತ್ತ ತಕ್ಷಣವೇ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪೋಸ್ಟ್ ಮಾರ್ಟಮ್ ಮಾಡಿ ಪೋಲೀಸರು ಇಲ್ಲಿ ಎಲ್ಲೋ ಸುಟ್ಟೆದ್ದಾರೆ. ಅವನು ಹೇಗೆ ಸತ್ತ ಎನ್ನುವುದರ ಬಗ್ಗೆ ತಾವು ಒಂದು ವಿಚಾರಣೆ ಮಾಡಬೇಕು. ಅದರ ಜೊತೆಗೆ ಹುಡುಗನ ತಂದೆತಾಯಿಗಳು ನನ್ನ ಹತ್ತಿರ ಬಂದಿದ್ದರು. ಅವನ ಪೋಷಕವರ್ಗದವರು ಬಹಳ ಬಡವರು ಇದ್ದಾರೆ. ಹುಡುಗ ಬೆಂಗಳೂರಿಗೆ ನಮ್ಮ ತಾಲ್ಲೂಕಿಗೆ ಬಂದಿದ್ದೇ ಕೂಲಿ ಮಾಡುವುದಕ್ಕಾಗಿ, ಏನು ಮಾಡುವುದು ಸ್ವಾಮಿ, ಅವನು ಸತ್ತುಹೋಗಿಬಿಟ್ಟಿದ್ದಾನೆ ಎಂದು ಅವರು ಅಳುತ್ತಾ ಇದ್ದಾರೆ. ಇದರ ಬಗ್ಗೆ ಒಂದು ತನಿಖೆಯ ಜೊತೆಗೆ ನಾನು ನಿಮ್ಮನ್ನು ಕೇಳತಕ್ಕದ್ದು. ಈ ಜೈಲಿನಲ್ಲಿರತಕ್ಕಂಥ ಪರಿಸ್ಥಿತಿಯನ್ನು ತಾವು ಸುಧಾರಣೆ ಮಾಡಬೇಕು. ಶ್ರೀಮತಿ ಸ್ನೇಹಲತಾ ರೆಡ್ಡಿಯವರು, ಇದೇ ರೀತಿ ಹಿಂದೆ ಕಾರಾಗೃಹದಲ್ಲಿದ್ದು ಅವರಿಗೆ ಅಸ್ತಮ ಇತ್ತು. ಅದಕ್ಕೆ ಟ್ರೀಟ್‌ಮೆಂಟ್ ವ್ಯವಸ್ಥೆಯನ್ನೂ ಮಾಡಲಿಲ್ಲ.

ತುರ್ತು ಪರಿಸ್ಥಿತಿ ಸಂದರ್ಭ ಇತ್ತು ಎಂದು ಹೇಳಿ ಆಕೆ ಪೆರೋಟ್ ಮೇಲೆ ಆಕೆ ಹೊರಗಡೆ ಬಂದ ಮೇಲೆ ಸತ್ತಳೇ ವಿನಹ ಜೈಲಿನಲ್ಲಿ ಸ್ನೇಹಲತಾ ರೆಡ್ಡಿಯವರು ಸಾಯಲಿಲ್ಲ. ಪೋಲೀಸರ ಬ್ರೂಟಲ್ ಟ್ರೀಟ್‌ಮೆಂಟ್‌ನಿಂದಾಗಿ ಆಕೆ ಸತ್ತಿದ್ದುದು. ಕರ್ನಾಟಕದ ಇತಿಹಾಸದಲ್ಲೇ ಇಂಥಾದ್ದು ಆಗಿರಲಿಲ್ಲ. ಅಂತಹ ಕಟುಕರು ಆವತ್ತು ಈ ಇಲಾಖೆಯಲ್ಲಿ ಇದ್ದರು. ಈ ದೇಶದ ಕಾನೂನು ಕೂಡ ಹಾಗೆಯೇ ಇತ್ತು. ಅದರ ಬಗ್ಗೆ ಇವತ್ತು ಚರ್ಚೆ ಮಾಡಿ ಪ್ರಯೋಜನ ಇಲ್ಲ. ಆದರೆ ನಾನು ಹೇಳತಕ್ಕದ್ದು, ಈಗ ಜೈಲಿನಲ್ಲಿತಕ್ಕಂಥ ಅಂಡರ್ ಟ್ರಯಲ್ಸ್ ಎಲ್ಲಾ ಸಾಯುತ್ತಾರೆ ಎಂದು ಹೇಳಿದರೆ, ಇದಕ್ಕೆ ಏನು ಹೇಳಬೇಕು? ಇದರ ಬಗ್ಗೆ ತೀವ್ರವಾಗಿ ಗಮನ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಅಲ್ಲಿರತಕ್ಕಂಥವರೆಲ್ಲರೂ ಖದೀಮರು ಎಂದು ಹೇಳುವುದಕ್ಕೆ ಆಗುವುದಿಲ್ಲ. ತನ್ನ ಸ್ವಂತ ಅನುಭವದಲ್ಲಿ ಹೇಳಬೇಕು ಎಂದರೆ, ಹೊರಗಡೆ ಇರತೆಕ್ಕಂಥ ಜನರಿಗಿಂತ ಜೈಲಿನಲ್ಲಿ ಒಳಗಡೆ ಇರತಕ್ಕಂಥವರೇ ಒಳ್ಳೆಯವರು. ಯಾವುದೋ ಒಂದು ಆವೇಶಕ್ಕೋ, ಕ್ಷೋಭೆಗೋ ಅವರು ಒಳಗಾಗಿ ಕೆಲವು ಕೃತ್ಯಗಳನ್ನು ಮಾಡಿ ಜೈಲಿಗೆ ಹೋಗಿರುತ್ತಾರೆ. ಜೊತೆಗೆ ಅವನು ಅಂಡರ್ ಟ್ರಯಲ್ಸ್ ಯಾರೇ ಆಗಿರಲಿ even if he is to be hanged, he has to be hanged as per the law. ಆತ ಹೇಗೆ ಸತ್ತ ಎನ್ನುವುದರ ಬಗ್ಗೆ, ಸದನಕ್ಕೆ ತಾವು ತಿಳಿಸಬೇಕು. ಇಂತಹ ಘಟನೆಗಳು ಮತ್ತೆ ಪುನರಾವರ್ತನೆಯಾಗದ ಹಾಗೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

5) ಚಾಮರಾಜನಗರ ತಾಲ್ಲೂಕಿನ ನಾಗವಳ್ಳಿ ಗ್ರಾಮದ ಉಪ್ಪಾರ ಕೋಮಿನ ವ್ಯಕ್ತಿಯ ಕೊಲೆ.

ಶ್ರೀ ಆರ್. ವಿ. ದೇಶಪಾಂಡೆ : ಈಗ ಮಾನ್ಯ ಸಿಂಧ್ಯರವರು ವಿವರವಾಗಿ ಹೇಳಿದ್ದಾರೆ. ಆದರೆ ನನಗೆ ಬಹಳ ಆಶ್ಚರ್ಯವಾಗುತ್ತಿದೆ, ಈ ರಾಜ್ಯದಲ್ಲಿ ವೀಕರ್ ಸೆಕ್ಷನ್‌ಗಳ ಕೊಲೆಗಳು, ಲಾಕಪ್ ಡೆತ್‌ಗಳು ದಿನೆದಿನೇ ಹೆಚ್ಚಾಗುತ್ತಿದೆ. ಮುಖ್ಯಮಂತ್ರಿಗಳು ಇಲ್ಲಿ ನನ್ನ ಇಲಾಖೆಯಲ್ಲಿ ಹತೋಟಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಪ್ರತಿ ಸಲ ಹೇಳಿದರೂ ಕೂಡ ಪ್ರತಿದಿನ ಲಾಕ್‌ಅಪ್ ಡೆತ್ ಆಗುತ್ತಿದೆ. ಅಥವಾ ಪರಿಶಿಷ್ಟಜನರ, ಹಿಂದುಳಿದ ಜನಾಂಗದವರ ಮರ್ಡರ್ ಆಗುತ್ತಿದೆ. ಈ ಪ್ರಕಾರ ಇವರು ರಾಜ್ಯದಲ್ಲಿ ತೆಗೆದುಕೊಂಡುಹೋದರೆ ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ತಮ್ಮ ಹತೋಟಿ ಈ ಇಲಾಖೆಮೇಲೆ ಹೋಗಿದೆ. ಇವತ್ತು ಪೋಲೀಸರು ಸರಿಯಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿಲ್ಲ. ಜೈಲಿನಲ್ಲಿ ಲಾಕಪ್ ಡೆತ್ ಆಗಿದೆ. ಅದು ಮುಂಜಾನೆ ಕಾಫಿ ಕೊಡುವುದಕ್ಕೆ ಹೋದಾಗ ಗಾರ್ಡ್‌ಗೆ ಗೊತ್ತಾಗಿದೆ. ಹಾಗಾದರೆ ಅಲ್ಲಿ ಲಾಕಪ್ ಡೆತ್ ಏಕೆ ಆಯಿತು? ಅದಕ್ಕೆ ಕಾರಣರು ಯಾರು? ಹ್ಯಾಂಗ್ ಮಾಡಿಕೊಂಡಿದ್ದಾನೋ ಹೇಗೆ? ಪೋಲೀಸರು ಹಾರ್ಟ್ ಫೇಲ್ಯೂರು ಆಗಿದೆ ಎಂದು ಹೇಳುತ್ತಾರೆ. ಪೋಲೀಸರು ಯಾವಾಗಲೂ ಒಳ್ಳೆಯ ಕಾರಣವನ್ನೇ ಕೊಡುತ್ತಾರೆ. ಇದರ ಬಗ್ಗೆ ತಾವು ತನಿಖೆ ಮಾಡಬೇಕು. ಇದಕ್ಕೆ ಜವಾಬ್ದಾರಿ ಅಧಿಕಾರಿಗಳು ಯಾರಿದ್ದಾರೆ, ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಅವನನ್ನು ಅಕ್ಕೋಬರ್‌ನಲ್ಲಿ ಅರೆಸ್ಟ್ ಮಾಡಿದ್ದಾರೆ, ಅದರ ಕ್ರಮ ತೆಗೆದುಕೊಳ್ಳುವುದು ಬೇರೆ ಪ್ರಶ್ನೆ. ಆದರೆ ಇವತ್ತು ಏನು ಲಾಕಪ್‌ಡೆತ್ ಆಗಿದೆ, ಅದರ ಬಗ್ಗೆ ತಾವು ಸ್ಪಷ್ಟೀಕರಣ ನೀಡಬೇಕಾಗುತ್ತದೆ. ಇನ್ನೊಂದು ಇವತ್ತು ಯಾವ ಅಧಿಕಾರಿ ಇದ್ದಾನೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕೇವಲ ಸಸ್ಪೆಂಡ್ ಮಾಡಿದರೆ ಆಗುವುದಿಲ್ಲ. ತಾವು ಹೇಳಬಹುದು, ಗಾರ್ಡ್ ಸಸ್ಪೆಂಡ್ ಮಾಡಿದ್ದೇವೆ, ಕಾನ್‌ಸ್ಟೇಬಲ್ ಸಸ್ಪೆಂಡ್ ಮಾಡಿದ್ದೇವೆ ಎಂದು. ಆದರೆ, ರಾಜ್ಯದಲ್ಲಿ ಇಂತಹ ಲಾಕ್‌ಅಪ್ ಡೆತ್ಸ್ ಆಗದಂತೆ ಮಾಡಲು ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಿ ; ಇನ್ನು ಮುಂದೆ ಲಾಕಪ್ ಡೆತ್ಸ್ ಆದರೆ, Station inspector or will be suspended, COD inquiry will be

ordered ಎಂದು ಹೇಳಿದರೆ Is it sufficient? ಇದು ಆಗಬಾರದು. ಇದರ ಬಗ್ಗೆ ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಹೇಳಬೇಕು. ಮತ್ತೊಂದು ಮಾತು ಇದೇ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. 17-03-93ರಂದು, ಚಾಮರಾಜನಗರ ತಾಲ್ಲೂಕಿನ, ಸಂತೇಮಾರಹಳ್ಳಿ ಕ್ಷೇತ್ರದ, ನಾಗವಳ್ಳಿ ಗ್ರಾಮದಲ್ಲಿ ಉಪ್ಪಾರ ಕೋಮಿನವರ ಮರ್ಡರ್ ಆಗಿದೆ. ಒಬ್ಬ ಬಡ ಉಪ್ಪಾರನ ಮರ್ಡರ್ ಆಗಿದೆ. ಇವತ್ತಿನವರೆಗೆ ಯಾರೂ ಅರೆಸ್ಟ್ ಆಗಿಲ್ಲ. ಇದರ ಬಗ್ಗೆ ಯಾವುದೇ ಕ್ರಮ ಇಲ್ಲ. ಬಡ ಉಪ್ಪಾರ ಸತ್ತಿದ್ದಾನೆ, ಅವನ ಮನೆಯವರಿಗೆ ಪರಿಹಾರವನ್ನೂ ಕೊಟ್ಟಿಲ್ಲ. ಈ ಸಂತೇಮಾರನಹಳ್ಳಿ ಕ್ಷೇತ್ರದಲ್ಲಿ ಪರಿಶಿಷ್ಟಜನಾಂಗ ಮತ್ತು ಉಪ್ಪಾರಜನಾಂಗದವರು ಇದ್ದಾರೆ. ಈ ಪ್ರಕಾರ ಆಗುತ್ತಾ ಹೋದರೆ, ನೀವು ಯಾವ ಪ್ರಕಾರ ಸರ್ಕಾರ ನಡೆಸುವುದಕ್ಕೆ ಸಾಧ್ಯವಾಗುತ್ತದೆ? ಜನ ನಿಮ್ಮ ಮೇಲೆ ಯಾವ ರೀತಿ, ವಿಶ್ವಾಸ ಇಡಬೇಕು. ಕಾಯಿದೆ ವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಬಿದ್ದಿದೆ. ಇದು ಮುಂದೆ ಆಗಬಾರದು. ಇದರ ಬಗ್ಗೆ ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ, ಎಂಬುದನ್ನು ಹೇಳಬೇಕು. ಇದೇ ಪ್ರಕಾರ, ನಾಗವಳ್ಳಿ ಗ್ರಾಮದ ವಿಚಾರ ಏನು ಪ್ರಸ್ತಾಪ ಮಾಡಿದ್ದೇನೆ, ಅದರ ಬಗ್ಗೆ ಯಾವ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೀರಿ? ಇದುವರೆಗೂ ಯಾರನ್ನೂ ಅರೆಸ್ಟ್ ಮಾಡಿಲ್ಲ, ಏಕೆ ಅರೆಸ್ಟ್ ಮಾಡಲಿಲ್ಲ. ಇದಕ್ಕೆ ತಾವು ಸೃಷ್ಟೀಕರಣ ನೀಡಬೇಕು ಮತ್ತು ಅವರಿಗೆ ಪರಿಹಾರ ಕೊಡತಕ್ಕ ವ್ಯವಸ್ಥೆ ತಮ್ಮ ಸರ್ಕಾರದಿಂದ ಆಗಬೇಕೆಂದು ಈ ಸದನದಲ್ಲಿ ಹೇಳುತ್ತಾ, ಯಾರು ಸತ್ತಿದ್ದಾರೆ; ಆ ಉಪ್ಪಾರ ವ್ಯಕ್ತಿಯ ಹೆಸರು ಮಹಾದೇವ ಶೆಟ್ಟಿ ಎಂದು, ಇವರ ಮನೆಯವರಿಗೆ ಪರಿಹಾರ ಕೊಡತಕ್ಕ ವ್ಯವಸ್ಥೆ ಮಾಡಬೇಕು. ಯಾರೇ ಇರಲಿ, ಯಾವುದೇ ಸಮಾಜ ಇರಲಿ, ಯಾವ ಜಾತಿ ಇರಲಿ, ಇಂತಹ ವಿಚಾರದಲ್ಲಿ ಸರ್ಕಾರ ನಿಷ್ಪೂರವಾದ ಕ್ರಮ ತೆಗೆದುಕೊಳ್ಳಬೇಕು. ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದಕ್ಕೆ ಸ್ಪಷ್ಟೀಕರಣ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ, ಕೇಂದ್ರ ಕಾರಾಗೃಹ ಏನಿದೆ, ಇದರ ಸುಧಾರಣೆ, ಮೊದಲು ಅತಿ ಮುಖ್ಯವಾಗಿ ಆಗಬೇಕಾಗಿದೆ. ಯಾವುದೋ ಓಬೀರಾಯನ ಕಾಲದ ವ್ಯವಸ್ಥೆ ಅದರೊಳಗಿದೆ. ಸಾಮಾನ್ಯವಾಗಿ; ಪೋಲೀಸ್ ಸ್ಟೇಷನ್‌ನಲ್ಲಿ, ಲಾಕಪ್‌ನಲ್ಲಿ ಸಾವು ಸರ್ವೇಸಾಮಾನ್ಯ. ಆದರೆ, ಜೈಲಿನಲ್ಲಿ ಸಾವು ಎಂದು ಹೇಳುವುದು, ಬಹಳ ಚಿಂತನೆ ಮಾಡಿ, ಯೋಚನೆ ಮಾಡತಕ್ಕ ವಿಚಾರ . . .

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಒಂದೇ ವಿಷಯವನ್ನು ಅನೇಕ ಬಾರಿ ಹೇಳುವುದಕ್ಕೆ ನಿಯಮ 314 ಒಪ್ಪುವುದಿಲ್ಲ. ಆದ್ದರಿಂದ, ಹೇಳಿದಂತಹ ವಿಷಯವನ್ನೇ ಪುನಃ ಹೇಳದೇ ಸಮಯದ ಅಭಾವದಿಂದ, ಬೇರೆ ವಿಷಯ ಇದ್ದರೆ, ಮಾನ್ಯ ಸದಸ್ಯರು ಹೇಳಬಹುದು. ಏಕೆಂದರೆ, ಹೇಳಿದ ವಿಷಯವನ್ನೇ ಮತ್ತೆ ಹೇಳುವುದಕ್ಕೆ ನಿಯಮ ವಿರೋಧವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ತಾವು ಗೃಹಮಂತ್ರಿಗಳೂ ಆಗಿದ್ದೀರಿ, ಒಂದು ಸಾರಿ ಆ ಜೈಲಿನ ಸಂದರ್ಶನ ಮಾಡಿ. ತಾವು ಮೊನ್ನೆ ಸಮಾರಂಭಕ್ಕೆ ಹೋಗಿದ್ದೀರಿ. ಆಗ ತಮಗೆ ಗೊತ್ತಾಗುವುದಿಲ್ಲ. ಆಗ ಒಂದು ವ್ಯವಸ್ಥೆ ಇರುತ್ತದೆ. ಅಲ್ಲಿ ಕುರ್ಚಿ, ಹಾರ, ತುರಾಯಿ, ವ್ಯವಸ್ಥೆ ಮಾಡಿರುತ್ತಾರೆ. ಮುಖ್ಯಮಂತ್ರಿಗಳು ಜೈಲಿಗೆ ಬರುತ್ತಾರೆಂದು ಎಂದು ಹೇಳಿದರೆ, ಹಾರ, ತುರಾಯಿ ಹಿಡಿದುಕೊಂಡು ನಿಂತಿರುತ್ತಾರೆ. ಆ ತರಹ ಹೋಗತಕ್ಕ ಜೈಲೇ ಬೇರೆ. ನೀವು ತಕ್ಷಣ, ಯಾರಿಗೂ ಗೊತ್ತಿಲ್ಲದೆ, ನಿಮ್ಮ ಕಾರು ಮನೆಗೆ ಹೋಗುವಾಗ, ಸ್ವಲ್ಪ ಆ ಕಡೆ ತಿರುಗಿಸಿ ಎಂದು ಹೇಳಿದರೆ, ತಕ್ಷಣ ಯಾರಿಗೂ ಹೇಳದೆ ಒಳಗಡೆ ಹೋಗಬಹುದು. ನೀವು ಒಂದು ಸಾರಿ ಆ ರೀತಿ ಹೋದರೆ, ನಿಮಗೆ ಅಲ್ಲಿನ ಪರಿಸ್ಥಿತಿ ಗೊತ್ತಾಗುತ್ತದೆ.